## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವ್ಯಾಪ್ತಿಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ನಿರ್ವಹಿಸುತ್ತಿರುವ 30 ರಾಜ್ಯ ಅನುದಾನಿತ ವಿಶೇಷ ಶಾಲೆಗಳ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಪಿಂಚಣಿ ಸೌಲಭ್ಯವನ್ನು ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: SWL 18 PHP 1982, ದಿನಾಂಕ: 11-08-1982.

2) ಸರ್ಕಾರದ ಆದೇಶ ಸಂಖ್ಯೆ: ಮಮಇ/259/ಪಿಹೆಚ್‌ಪಿ/2007, ದಿನಾಂಕ: 23-07-2009.

3) ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಬೆಂಗಳೂರು ಇವರ ಪತ್ರ ಸಂಖ್ಯೆ: ನಿಅಕಇ/ರಾ.ಅನು/ ನಿವೃತ್ತಿ ವೇತನ/ ಮಾಹಿತಿ/2009-10/7956,4945 ಮತ್ತು 276, ದಿನಾಂಕ: 23-12-2009, 28-1-2012 ಮತ್ತು 25-4-2012.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ರಾಜ್ಯ ಅನುದಾನದಡಿ ವಿಕಲಚೇತನರಿಗಾಗಿ ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ಅನ್ವಯವಾಗುವಂತೆ ಅನುದಾನ ಸಂಹಿತೆ 1982ರಡಿಯಲ್ಲಿ ನಿಯಮ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ದಿನಾಂಕ: 11-8-1982ರ ಆದೇಶದ ಐಟಂ 22ನ್ನು ಭಾಗಶ: ಮಾರ್ಪಡಿಸಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವ್ಯಾಪ್ತಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಿರ್ವಹಿಸುತ್ತಿರುವ 30 ರಾಜ್ಯ ಅನುದಾನಿತ ವಿಶೇಷ ಶಾಲೆಗಳ ಬೋಧಕೇತರ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನವನ್ನು ಶೇಕಡ 50 ರಿಂದ 100ಕ್ಕೆ ಭವಿಷ್ಯವರ್ತಿಯಾಗಿ (with prospective effective) ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಉಲ್ಲೇಖ(3)ರ ದಿನಾಂಕ: 23-12-2009ರ ಪತ್ರದಲ್ಲಿ, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು, ರಾಜ್ಯ ಅನುದಾನಿತ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸಿ ಈಗಾಗಲೇ ನಿವೃತ್ತರಾದ ಸಿಬ್ಬಂದಿಗಳು, ನಿವೃತ್ತಿ ವೇತನ ಸೌಲಭ್ಯ ಮಂಜೂರಾತಿ ಮಾಡಲು ಮೇಲಿಂದ ಮೇಲೆ ಬೇಡಿಕೆ ಸಲ್ಲಿಸುತ್ತಿದ್ದು, ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಾಲಮಿತಿ ವೇತನ ಬಡ್ತಿ, ಸ್ವಯಂ ನಿವೃತ್ತಿ ವೇತನ, ರಜೆ ನಗದೀಕರಣ, ಅನುಕಂಪ ಆಧಾರಿತ ನೌಕರಿ, ಖಜಾನೆ ಮೂಲಕ ವೇತನ ಬಟವಾಡೆ ಮಾಡುವ ಸೌಲಭ್ಯ ವಿಸ್ತರಿಸುವಂತೆ ಮನವಿಗಳನ್ನು ಸಲ್ಲಿಸುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: SWL 18 PHP 1982, ದಿನಾಂಕ: 11-8-1982 ಅನುದಾನ ಸಂಹಿತೆಯ ಮಾರ್ಗಸೂಚಿಯಲ್ಲಿನ ನಿಯಮಗಳ ಪ್ರಕಾರ ನಿರ್ವಹಿಸಲಾಗುತ್ತಿದ್ದು, ಕಂಡಿಕೆ 27ರಲ್ಲಿ 'Triple Benefit Scheme (Contributory Provident fund, Pension, Gratuity)' ಕುರಿತಂತೆ, 'As prescribed in the Education Department for Grant-in-aid institution' ಹಾಗೂ ವೇತನ ಭತ್ಯೆಗಳಿಗೆ ಸಂಬಂಧಿಸಿದಂತೆ ನಿಯಮ 16ರ(d)ಯಲ್ಲಿ 'The Scale of Pay and allowances adopted by the Department of Education shall be adopted for the Staff of the Institution' ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ಅನುದಾನ ಸಂಹಿತೆ 1982ರ ಪ್ರಕಾರ ಶಿಕ್ಷಣ ಇಲಾಖೆಯಲ್ಲಿ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ರಾಜ್ಯ ಅನುದಾನಿತ ವಿಶೇಷ ಶಾಲೆಗಳ ಸಿಬ್ಬಂದಿಗಳಿಗೂ ವಿಸ್ತರಿಸುವಂತೆ ಕೋರಿರುತ್ತಾರೆ. ಮುಂದುವರಿದು, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಈ ಸೌಲಭ್ಯಗಳನ್ನು ವಿಸ್ತರಿಸುವ ಕುರಿತು

..2

Recd on 19th March 2013.

ಸರ್ಕಾರದಿಂದ ಯಾವುದೇ ಸ್ಪಷ್ಟ ಮಾರ್ಗದರ್ಶನ/ಆದೇಶ ಹೊರಡಿಸಿಲ್ಲದ ಕಾರಣ ಸರ್ಕಾರದ ಆದೇಶದ ಅಗತ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 17 ಪಿಹೆಚ್‌ಪಿ 2010, ಬೆಂಗಳೂರು**
**ದಿನಾಂಕ: 19-3-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯ ಸರ್ಕಾರದ ಸಹಾಯಧನಕ್ಕೊಳಪಟ್ಟಿರುವ ವಿಶೇಷ ಶಾಲೆಗಳಲ್ಲಿನ ದಿನಾಂಕ: 1-4-2006ರ ಮುಂಚೆ ಸೇರಿರುವ ಅನುಬಂಧದಲ್ಲಿ ತೋರಿಸಿರುವ ನೌಕರರಿಗೆ ಪಿಂಚಣಿ ಸೌಲಭ್ಯವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಲಾಗಿದೆ.

1. ಈ ಸೌಲಭ್ಯವು ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯವರ್ತಿಯಾಗಿ (with prospective effect) ಜಾರಿಗೆ ಬರುತ್ತದೆ.
2. ದಿನಾಂಕ: 1-4-2006ರ ನಂತರ ನೇಮಕವಾಗುವ ಬೋಧಕ/ಬೋಧಕೇತರ ಸಿಬ್ಬಂದಿಗಳು ನೂತನ ಪಿಂಚಣಿಯೋಜನೆ ವ್ಯಾಪ್ತಿಗೆ ಒಳಪಡುತ್ತಾರೆ.
3. ಈ ಪಿಂಚಣಿ ಸೌಲಭ್ಯವು ದಿನಾಂಕ: 1-4-2006ಕ್ಕಿಂತ ಮೊದಲು ಸೇವೆಗೆ ಸೇರಿದ/ಎಲ್ಲಾ ಅನುಮೋದಿತ, ಪ್ರಸ್ತುತ ಸೇವೆಯಲ್ಲಿರುವ ಅಥವಾ ಈಗಾಗಲೇ ನಿವೃತ್ತರಾದ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಆದೇಶ ಹೊರಡಿಸಿದ ದಿನಾಂಕಕ್ಕಿಂತ ಮೊದಲಿನ ಯಾವುದೇ ಅವಧಿಗೆ ನಿವೃತ್ತಿ ವೇತನ ಬಾಕಿಯನ್ನು ನೀಡತಕ್ಕದಲ್ಲ.
4. ಸಂಬಂಧಪಟ್ಟ ಸ್ವಯಂ ಸೇವಾ ಸಂಸ್ಥೆಯು ನಡೆಸುತ್ತಿರುವ ವಿಶೇಷ ಶಾಲೆ ಹಾಗೂ ಅಲ್ಲಿನ ಅನುಮೋದಿತ ಬೋಧಕ/ಬೋಧಕೇತರ ಸಿಬ್ಬಂದಿಯು ದಿನಾಂಕ:11-8-1982ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ಎಲ್ಲಾ ಅರ್ಹತೆಗಳನ್ನು ಹೊಂದಿರಬೇಕು.
5. ಈ ಆದೇಶದಡಿ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಅಧಿಕಾರವನ್ನು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರಿಗೆ ಪ್ರತ್ಯಾಯೋಜಿಸಲಾಗಿದೆ. ಸದರಿ ಪ್ರಾಧಿಕಾರಿಯು ಎಲ್ಲಾ ನಿವೃತ್ತಿವೇತನ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸಂಬಂಧಿಸಿದ ಸ್ವಯಂ ಸೇವಾ ಸಂಸ್ಥೆ ಹಾಗೂ ಸಂಬಂಧಿಸಿದ ಅನುಮೋದಿತ ಬೋಧಕ/ಬೋಧಕೇತರರ ಸಿಬ್ಬಂದಿಯು ಅನುದಾನ ಸಂಹಿತೆಯ ಸಂಬಂಧಿಸಿದ ನಿಯಮಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಂಡು ನಿವೃತ್ತಿ ವೇತನವನ್ನು ಮಂಜೂರು ಮಾಡತಕ್ಕದ್ದು.

ರಾಜ್ಯ ಸರ್ಕಾರದ ಸಹಾಯಾನದಾನಕ್ಕೊಳಪಟ್ಟಿರುವ ವಿಶೇಷ ಶಾಲೆಗಳಿಗೆ ಹಾಗೂ ದಿನಾಂಕ: 1-4-2006ರ ಮುಂಚೆ ಸೇರಿರುವ ಬೋಧಕ/ಬೋಧಕೇತರರಿಗೆ ಪಿಂಚಣಿ ಹಾಗೂ

..3

ಇದಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಸಹಾಯಧನ (Grant -in-aid) ಲೆಕ್ಕಶೀರ್ಷಿಕೆ 2071-01-104-2-08, ನಿವೃತ್ತಿ ವೇತನ ಪರಿವರ್ತನೆ ಬಡವಾಡೆ (Commutation payment) ಲೆಕ್ಕ ಶೀರ್ಷಿಕೆ 2071-01-102-3-02 ಮತ್ತು ನಿವೃತ್ತಿ ವೇತನ ಬಟವಾಡೆ (Pension Payment) ಲೆಕ್ಕ ಶೀರ್ಷಿಕೆ 2071-01-109-1-02ರಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 60 ವೆಚ್ಚ-3 2013, ದಿನಾಂಕ: 2-3-2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
3) ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4) ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
5) ಎಲ್ಲಾ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 & 9)
7) ಎಲ್ಲಾ ಖಜಾನಾಧಿಕಾರಿಗಳು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

(ಕ್ರಸಂ: 3,4,5 ಮತು 6 ರಲ್ಲಿನ ಅಧಿಕಾರಿಗಳಿಗೆ, ನಿರ್ದೇಶಕರು, ವಿಕಲಚೇನತರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಮುಖಾಂತರ)